"ಪುಣ್ಣೆ ಹತ್ತಲೆವ್ವಾ ನಿನಗ, ಮೂಕಪ್ರಾಣಿ ದಢಾ ಮಾಡಿ ನನ್ನ ಜೀವಾ ಉಳಿಸಿದಿ" ಎನ್ನುತ್ತ ಕಾಲಿಗೆ ಬಿದ್ದ.

"ಐ ಮೂಳಾ ಇದೇನ ಮಾಡಾಕ್ಹತ್ತಿ! ಬಿಡು ಸರಿ" ಎಂದು ಬೀರನ ಭುಜ ಹಿಡಿದು ಸರಿಸಿದಳು.

"ತಾಯಿ ಸರಿ ಅದಿ ಎವ್ವಾ ಸನಮಾಡಿದ್ರೇನು ತಪ್ಪಾತಿ ಬಿಡು" ಎಂದು ಅವನ ಹೆಂಡತಿ ಹನುಮವ್ವ ತಾನೂ ನಮಸ್ಕಾರ ಮಾಡಿದಳು.

ಕೋಳಿ ಕೂಗೂದಕ ಎದ್ದು ದಾನಮ್ಮತ್ತಿ ಜಳಕಾ, ಲಿಂಗಪೂಜಾ ಮಾಡಿಕೊಂಡು ಅಸುಂಡಿ ವಸ್ತಿ ಬಸ್ಸು ಹಿಡಿದಳು. ಅದು ಕರಿಕಟ್ಟಿ, ಉಡಕೇರಿ, ಬಳ್ಳೋಡಿ, ಸಿಸಾಂಬರ, ಬುಡರಕಟ್ಟಿ, ಗೋನಕೊಪ್ಪ, ಗುಡಕಟ್ಟಿ, ನಡಿನಕೊಪ್ಪ ವ್ಹಾಯಾ ಮಾಡಿಕೊಂಡು ದೊಡ್ಡವಾಡ ತಲುಪಿದಾಗ ಸಾಡೇಸಾತ ಹೊಡೆದಿತ್ತು. ಈ ಊರು, ಸಾವುಕಾರ ಮನಿ ಅಕಿಗೇನು ಹೊಸದಲ್ಲ. ಹತ್ತಾರು ಸಲ ಬಂದು ಹೋಗಿದ್ದಾಳೆ. ಇದೇ ಸಾವುಕಾರನ ಹೆಂಡ್ತಿ, ಅಜಮಾಸು ಅವಳ ವಾರಗಿದಾಕಿ, ಲಕ್ವಾ ಹೊಡೆದು ಹಾಸಿಗಿ ಹಿಡದಾಗ ಇವಳೇ ಆಕಿಗಿ ಇಲಾಜು ಮಾಡಿದ್ದು. ಮುಂಜಾನೆ, ಸಂಜೆ ಎರಡು ಹೊತ್ತು ಬಳ್ಳೊಳ್ಳಿ ಜಜ್ಜಿ, ವನಸ್ಪತಿ ಅಗಸುದ್ದೆ ಕುಟ್ಟಿ ಪುಡಿ ಮಾಡಿ ಅಗಸೆ ಎಣ್ಣೆಯಾಗ ಹಾಕಿ ಬಿಸಿ ಮಾಡಿ ತಿಕ್ಕಿ ತಿಕ್ಕಿ ದಢಾ ಮಾಡಿದ್ದಳು. ಸನಸನೇಕ ಒಂದು ತಿಂಗಳು ಇಲ್ಲೆ ಇದ್ದಳು. ತಿಕ್ಕೂ ಕಡತಕ್ಕ ಇವಳ ಮೈಯಾಗ ದಳಾದಳಾ ಬೆವರು ಇಳಿತಿದ್ದರೆ ಸಾಹುಕಾರ್ತಿ ವಿಲಿವಿಲಿ ವದ್ದಾಡತಿದ್ದಳು. "ಸಾಕು ಬಿಡು ದಾನಮ್ಮಾ, ನೀ ತಿಕ್ಕೂ ನೋವು ತಡಕೊಳ್ಳಾಕ ಆಗೂದಿಲ್ಲ ತಾಯಿ, ನಾ ಕಣ್ಣು ಮುಚ್ಚದರೂ ಚಿಂತಿಲ್ಲಾ ತಿಕ್ಕೂದು ಬಿಡು" ಎಂದು ಕೈ ಮುಗಿದಳು. "ನಾ ನಿನಗೆಲ್ಲಿ ತಿಕ್ಕಾಕ್ಹತ್ತೇನಿ? ನಿನ್ನ ಮೈಯಾಗ ಸೇರ್ಕೊಂಡ ಲಕ್ವಾಕ್ಕ ತಿಕ್ಕಾಕ್ಹತ್ತೇನಿ. ಸಾವಕಾರ್ತಿ, ನೀ ನಿಮ್ಮ ಮನಿದೇವರನ್ನು ಧೇನಿಸ್ಕೊಂತ ಸುಮ್ಮನೆ ಮಲಕೊ, ತಿಕ್ಕೂ ಕಡತಕ್ಕ ಹೆದರಿ ಹಿತ್ತಲ ಬಾಗಿಲನಿಂದ ಪರಾರಿ ಆಗತಾಳು ಅವ್ವಾಳಿ ನೋಡತೀರು" ಎಂದು ಸಮಾಧಾನ ಹೇಳುತ್ತ ತಿಕ್ಕಿ ತಿಕ್ಕಿ ಬಿದ್ದ ಹೋದ ಕೈ ಕಾಲು ನೀಟ್ ಮಾಡಿದ್ದಳು. ವಾಪಸ್ ಊರಿಗೆ ಹೋಗೂವಾಗ ಸಾವಕಾರ ಐದೂ ಪಟ್ಟಿ ಹುಬ್ಬಳ್ಳಿ ರೇಸ್ಮಿ ಸೀರಿ, ಗುಳೇದಗುಡ್ಡದ ರೇಸ್ಮಿ ಕುಬಸದ ಖಣ ಆಯೇರಿ ಮಾಡಿ ಉಡಿ ತುಂಬಿಸಿದ್ದ. ತನ್ನ ಫ್ರೀ ಟ್ರೀಟ್‌ಮೆಂಟಿನ ಸಿದ್ಧಾಂತಕ್ಕೆ ಬದ್ಧಳಾಗಿ ಒಲ್ಲೆನೆಂದಾಗ, ''ಅಕ್ಕನಿಗೆ ತಮ್ಮನ ಕಡಿಂದ ತವರುಮನಿ ಉಡುಗೊರೆ'' ಎಂದು ಸಮಝಾಯಿಸಿದ್ದ. ದಾನಮ್ಮತ್ತಿ ಮೂಕಳಾಗಿದ್ದಳು.

ಅಂಗಳದಾಗ ಅರಾಮ ಕುರ್ಚಿದಾಗ ಕುಳಿತಿದ್ದ ಸಾವುಕಾರ ದಾನಮ್ಮತ್ತಿ ಬರೂದು ನೋಡಿ ಕಾಲಿಗೆ ನೀರು ಕೊಡಿಸಿ ಪಡಸಾಲೆಯಲ್ಲಿ ಚಾಪೆ ಮೇಲೆ ಕೂಡ್ರಿಸಿ ನಾಸ್ಟಾ ತರಾಕ ಹುಕುಂ ಮಾಡಿದ. "ಅದೆಲ್ಲಾ ಆ ಮ್ಯಾಲೆ, ಮೊದಲು ಸೊಸಿ ಎಲ್ಲಿ ಅದಾಳು ತೋರಸಿರಿ" ಎಂದಳು. ಅವಳು ಮಲಗಿದ್ದ ಕೋಣೆಗೆ ಕರೆದುಕೊಂಡು ಹೋದರು.

ಕಾಟಿನ ಮೇಲೆ ಅಂಗಾತ ಮಲಗಿದ್ದಳು. "ಏನ ಕಮಾಯಿ ಮಾಡಿಕೊಂಡಿಯವಾ ಸೊಸಿಮುದ್ದ, ಕೆಳಗ ಇಳಿದು ಬಾ" ಎಂದಳು.

"ಏಳಾಕ ಆಗೂದಿಲ್ಲ ಎಮ್ಮಾ" ಎಂದಳು.

"ಬಾರಪಾ ಸಣ್ಣ ಸಾಹುಕಾರ, ಇಳಿಸ ಬಾ ನಿನ್ನ ಸಾಹುಕಾರ್ತಿನ್ನ."

ಸಾವಕಾಶ ಎಬ್ಬಿಸಿ ಕೂಡ್ರಿಸಿ ತಾನೊಂದು ಕಡೆ, ಗಂಡ ಒಂದು ಕಡೆ ರೆಟ್ಯಾಗ ಕೈಹಾಕಿ ಇಳಿಸಿ ಚಾಪಿ ಮ್ಯಾಲ ಡಬ್ಬು ಮಲಗಿಸಿದರು. ಸಣ್ಣ ಸಾಹುಕಾರನನ್ನು ಹೊರಗೆ ಕಳಿಸಿ ಸೀರಿ ಉಟ್ಟರಗಂಟು ಸಡಿಲು ಮಾಡಿ ಎಣ್ಣೆ ಸವರಿ ಸಾವಕಾಶ ಕೈಯಾಡಿಸತೊಡಗಿದಳು. ಮೈ ಸಡಿಲು ಬಿಡಲು ಹೇಳುತ್ತ ತುಸು ಭಾರ ಹಾಕಿ ತಿಕ್ಕತೊಡಗಿದಳು. ಬಾಧೆ ತಾಳದೆ ಒದ್ದಾಡುತ್ತ ಮೈ ಬಿಗಿ ಹಿಡಿದಳು. "ಗಾಡಿ ಮ್ಯಾಲ ಕುಂತಾಗ ಯಜಮಾನನ್ನು ಬಿಗಿಯಾಗಿ ಹಿಡಕೊಳ್ಳೂದ ಬಿಟ್ಟು ಈಗ ಮೈ ಬಿಗಿ ಹಿಡಿತೀ, ಬಿಡು"